ಸೃಜನಿ

SRUJANI: Indian Journal of Innovative Research and Development (SIJIRD)
Volume-1 Issue 6, January-February 2023, Pp. 17-28
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ದಲಿತ/ಬಂಡಾಯ ಸಾಹಿತ್ಯದ ಕಾಲಘಟ್ಟದ ಆಯ್ದ ಖಂಡಕಾವ್ಯಗಳಲ್ಲಿ ಪ್ರತಿಭಟನೆಯ ಸ್ವರೂಪ

**ಚಿಕ್ಕಣ್ಣ ಬಿ. ಎಸ್***
*ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮದರ್ಜೆ ಕಾಲೇಜು, ಬ್ಯಾಡಗಿ ಹಾಗೂ
ಸಂಶೋಧನಾ ವಿದ್ಯಾರ್ಥಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

***Abstract:***

*ಸಾವಿರಾರು ವರ್ಷಗಳ ಕಾವ್ಯ ಪರಂಪರೆಯ ವಸ್ತು ಮತ್ತು ಆಶಯವು ಪ್ರಗತಿಪರವಾದ ಹಾಗೂ ವೈಚಾರಿಕ ಪ್ರಜ್ಞೆಯ ಯಾವುದಾದರೂ ಒಂದು ನೆಲೆಯಲ್ಲಿ ಚರ್ಚೆಗೊಳಪಟ್ಟಿರುತ್ತದೆ. ಆಯಾ ಕಾಲಘಟ್ಟದ ಕವಿಯ ಅಧ್ಯಯನ ಸಾಮಗ್ರಿ ಅಂದಿನ ಸಮಾಜ, ಸಂಸ್ಕೃತಿ, ಜನಜೀವನ, ಹಾಗೂ ಅನುಭವಗಳ ಪಾತಳಿಯ ಮೇಲೆ ರೂಪಿತವಾಗಿರುವುದರಿಂದ ಸಮಕಾಲೀನ ಸಂದರ್ಭದ ಒತ್ತಾಸೆಗಳ ಮೂಲಕ ವ್ಯಾಖ್ಯಾನಿಸಲು ಪ್ರಯತ್ನಿಸಬಹುದು. "ದಲಿತ ಬಂಡಾಯ ಎಂಬ ಪದದ ಮುಖಾಂತರ ನಿರ್ದೇಶಿಸದಿದ್ದರೂ ಹಿಂದಿನಿಂದಲೂ ಕನ್ನಡ ಕವಿಗಳು ಬಂಡಾಯ ಮನೋಧರ್ಮವನ್ನು ಪ್ರಕಟಪಡಿಸಿರುವುದನ್ನು ಕಾಣಬಹುದು. ಪ್ರಸ್ತುತ ಲೇಖನದಲ್ಲಿ ದಲಿತ/ಬಂಡಾಯ ಸಾಹಿತ್ಯದ ಕಾಲಘಟ್ಟದ ಆಯ್ದ ಖಂಡಕಾವ್ಯಗಳಲ್ಲಿ ಪ್ರತಿಭಟನೆಯ ಸ್ವರೂಪವನ್ನು ವಿಶ್ಲೇಷಿಸಲಾಗಿದೆ.*

**Keywords:** *ದಲಿತ/ಬಂಡಾಯ ಸಾಹಿತ್ಯ, ಖಂಡಕಾವ್ಯ, ಪ್ರಗತಿಪರ, ಪ್ರತಿಭಟನೆ.*

## ಪೀಠಿಕೆ

*"ಬಂಡಾಯ ಮನೋಧರ್ಮದ ಸ್ವರೂಪ ಅಂದಂದಿನ ಚಾರಿತ್ರಿಕ ಸಂದರ್ಭದ ಒತ್ತಡಗಳನ್ನು ಅವಲಂಬಿಸಿರುವುದರಿಂದ ಹಿಂದಿನ ಕವಿಗಳ ಬಂಡಾಯ ಮನೋಧರ್ಮವನ್ನು ಎಲ್ಲ ಮಿತಿಗಳೊಂದಿಗೆ ಗುರುತಿಸಬೇಕು ಗೌರವಿಸಬೇಕು"* ಎನ್ನುವ ಮೊಗಳ್ಳಿ ಗಣೇಶ್‌ರವರ ಪ್ರಕಾರ ವರ್ತಮಾನದ ವಿದ್ಯಮಾನಗಳನ್ನು ಚರ್ಚಿಸುವಾಗ ಹಿಂದಿನ ಕಾವ್ಯ ವಸ್ತುವಿನಲ್ಲೂ ಪ್ರಭುತ್ವ, ವ್ಯವಸ್ಥೆ, ಧಾರ್ಮಿಕ ಮತ್ತು ಸಾಮಾಜಿಕ ಮೌಢ್ಯಾಚರಣೆ, ಅಸ್ಪೃಶ್ಯತೆ, ಜಾತಿಪದ್ಧತಿ, ಸಮಾಜದ ಅಂಕುಡೊಂಕು, ಸಮಕಾಲೀನ ಪ್ರತಿರೋಧದ ಆಶಯದ ದನಿಯ ಮೂಲಕ ದಲಿತ/ಬಂಡಾಯ ಸಂವೇದನೆಯ ಪ್ರತಿಭಟನೆಯ ಸ್ವರೂಪವನ್ನು ಗುರುತಿಸಬಹುದಾಗಿದೆ. "ಪಂಪ ಪ್ರಭುತ್ವದೊಳಗೆ ಇದ್ದುಕೊಂಡು ತನಗೆ ಸರಿಕಾಣದ ವ್ಯವಸ್ಥೆ ಮತ್ತು ಪ್ರಭುತ್ವದ ವಿರುದ್ಧ ಬಂಡಾಯ ಧೋರಣೆಯುಳ್ಳವನಾಗಿದ್ದ. ಅವನ ಕರ್ಣನ ಪ್ರೇಮ, ಪಂಚತಂತ್ರ ಕಥೆಗಳಲ್ಲಿನ ಪ್ರಭುತ್ವ ವಿರೋಧಿ ಗುಣ, ವಚನ ಚಳುವಳಿ ನಡೆಸಿದ ವರ್ಣ ವ್ಯವಸ್ಥೆಯ ವಿರೋಧಿ ಕಾರ್ಯಗಳು, ದಾಸ ಸಾಹಿತ್ಯದ ಸಾಮಾಜಿಕ ವಿಡಂಬನೆ, ಕುಮಾರವ್ಯಾಸ ಕಾವ್ಯದ ದ್ರೌಪದಿಯ ಪಾತ್ರ, ರಾಜಕಾರಣದ ವಿವಿಧ ಆಯಾಮಗಳು, ಸರ್ವಜ್ಞನ ಕಟಕಿ ವ್ಯಂಗ್ಯ, ಇವನ್ನೆಲ್ಲ ದಲಿತ/ಬಂಡಾಯ ಸಾಹಿತಿಗಳು ತಮ್ಮ ಸಾಹಿತ್ಯ ಪರಂಪರೆಯ ಪ್ರಗತಿಪರ ಅಂಶಗಳೆಂದು

***Please cite this article as:*** ಚಿಕ್ಕಣ್ಣ ಬಿ. ಎಸ್. (2023). ದಲಿತ/ಬಂಡಾಯ ಸಾಹಿತ್ಯದ ಕಾಲಘಟ್ಟದ ಆಯ್ದ ಖಂಡಕಾವ್ಯಗಳಲ್ಲಿ ಪ್ರತಿಭಟನೆಯ ಸ್ವರೂಪ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 1(6), 17–28.

ಗುರುತಿಸಿಕೊಳ್ಳುತ್ತಾರೆ” ಆ ಮೂಲಕ ದಲಿತ/ಬಂಡಾಯದ ಆಶಯಗಳಿಗೆ ಪ್ರಾಚೀನ ಮತ್ತು ಚಾರಿತ್ರಿಕ ಮಹತ್ವ ಲಭ್ಯವಾಗಿ ಅದು ನಿರಂತರ ಪ್ರವಹಿಸುವ ಮನೋಧರ್ಮವಾಗಿದೆ. ರನ್ನನ ಕಾವ್ಯ, ದುರ್ಗಸಿಂಹನ ಪಂಚತಂತ್ರ, ಬ್ರಹ್ಮಶಿವನ ‘ಸಮಯ ಪರೀಕ್ಷೆ’ಯಲ್ಲಿ ಪ್ರತಿಭಟನೆಯ ದನಿಗಳಿವೆ. ಆದುದರಿಂದ ಪಂಪನಿಂದ ಇಪ್ಪತ್ತನೇ ಶತಮಾನದ ಕನ್ನಡ ಸಾಹಿತ್ಯದವರೆಗೆ ಕಂಡು ಬರುವ ದಲಿತ/ಬಂಡಾಯದ ಆಶಯಗಳನ್ನು ಅಭಿವ್ಯಕ್ತಿಸುವ ಕ್ರಮವನ್ನು ಪ್ರತಿಭಟನೆಯ ವಿವಿಧ ಆಯಾಮಗಳನ್ನು ಗುರುತಿಸಲು ಸಾಧ್ಯವಿದೆ.

ನಾಡಿನ ಮೊದಲ ಜನತಾ ಚಳುವಳಿ ಎಂದರೆ ವಚನ ಚಳುವಳಿ. ವೈಚಾರಿಕವಾದ ನೆಲೆಗಟ್ಟಿನಲ್ಲಿ ಪ್ರಗತಿಪರವಾದ ಆಶಯಗಳನ್ನು ಹೊಂದಿತ್ತು. ಪ್ರಮುಖವಾಗಿ ಕೃಷಿಕರು, ಕಸುಬುದಾರರು, ಅನಕ್ಷರಸ್ಥರು, ಮಹಿಳೆಯರು, ಕೆಳವರ್ಗ ಮತ್ತು ದಲಿತ ಮುಂತಾದ ಶೋಷಿತರ ಚಳುವಳಿಯಾಗಿತ್ತು. ಸಾಮಾಜಿಕವಾಗಿ ಹಿಂದುಳಿದ, ಶೋಷಣೆಗೆ ಗುರಿಯಾದ ಮಹಿಳಾ ವರ್ಗ ಮತ್ತು ದಲಿತ ವರ್ಗವೂ ಈ ಚಳುವಳಿಯ ಒಂದು ಭಾಗವಾಗಿತ್ತು. ಆ ವರ್ಗಕ್ಕೆ ವಿಚಾರ ಮಾಡುವ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಕೊಟ್ಟು, ಪ್ರತಿಭಟನೆಯ ಮನೋಧರ್ಮವನ್ನು ತಂದುಕೊಟ್ಟದ್ದು ಶರಣ ಚಳುವಳಿ. ಅಸಮಾನತೆಯನ್ನು ಕೇಂದ್ರವಾಗಿಟ್ಟುಕೊಂಡು ವರ್ಗ, ಜಾತಿ, ಜನಾಂಗ, ಧರ್ಮ ಲಿಂಗತಾರತಮ್ಯವಿಲ್ಲದೆ ಸಕಲರೂ ಅನುಭವ ಮಂಟಪದಲ್ಲಿ ಪಾಲ್ಗೊಂಡು ವಿಚಾರ ವಿನಿಮಯ ಮಾಡಿಕೊಳ್ಳುತ್ತಿದ್ದುದು ಗಮನಾರ್ಹ ಸಂಗತಿಯಾಗಿದೆ.

ಸಮಾಜದಲ್ಲಿ ಆಳವಾಗಿ ಬೇರೂರಿದ್ದ ಜಾತಿ ಮತ್ತು ವರ್ಣಗಳ ವಿರುದ್ಧ ಶರಣರು ಸಿಡಿದೆದ್ದರು. ಬಸವಾದಿ ಶರಣರು ದಲಿತ ಮತ್ತು ಬಂಡಾಯ ಸಂವೇದನೆಯ ಅಭಿವ್ಯಕ್ತಿಯಿಂದ ಶೋಷಣೆಯ ಮೂಲವನ್ನು ಕಂಡುಹಿಡಿದು ಅದರ ನಿವಾರಣೆಗೆ ಶ್ರಮಿಸಿದರು. ಸಾಮಾಜಿಕವಾಗಿ ಅಸ್ಪೃಶ್ಯರೆನಿಸಿದ ಎಲ್ಲರು ಬಸವಾದಿ ಶಿವಶರಣರ ಪಾಲಿಗೆ ಸರಿಸಮವೆನಿಸಿದರು. ತಮ್ಮ ನಡೆನುಡಿಯನ್ನು ಕಾರ್ಯರೂಪಕ್ಕೆ ತರಲು ದಲಿತ ವಚನಕಾರರಾದ ಮಾದಾರ ಚನ್ನಯ್ಯ, ಡೋಹರ ಕಕ್ಕಯ್ಯ, ಕಾಳವ್ವೆ, ಮಡಿವಾಳ ಮಾಚಿದೇವ, ಮಾದಾರ ಧೂಳಯ್ಯ, ಅಂಬಿಗರ ಚೌಡಯ್ಯ ಮುಂತಾದವರು ವಚನಗಳನ್ನು ರಚಿಸುವ ಮೂಲಕ ಜಾತಿ, ಕುಲಗಳು ಹೇಗೆ ಭಿನ್ನವಾದವು ಎಂದು ತಮ್ಮದೇ ರೀತಿಯಲ್ಲಿ ವ್ಯಾಖ್ಯಾನ ಮಾಡಿದ್ದಾರೆ. ಸಾಮಾಜಿಕ ಸಮಸ್ಯೆಯನ್ನು ಗುರುತಿಸಿ ಮೌಢ್ಯತೆಗಳನ್ನು ಪ್ರಶ್ನಿಸಿದರು. ಇದು ಕನ್ನಡ ನಾಡಿನಲ್ಲಿ ಬಹುದೊಡ್ಡ ಪ್ರಗತಿದಾಯಕ ಘಟನೆ ಎನ್ನಬಹುದು. ವೇದ, ಶಾಸ್ತ್ರ, ಆಗಮ, ಉಪನಿಷತ್ತು, ಪುರಾಣ ಇವೆಲ್ಲವೂ ಮೇಲ್ಜಾತಿಯವರ ಸ್ವತ್ತಾಗಿತ್ತು. ಅವುಗಳನ್ನು ಸಂದರ್ಭಾನು ಸಮರ್ಥಿಸಿಕೊಳ್ಳುತ್ತಿದ್ದರು. ಅದನ್ನು ವಚನಕಾರರು ಖಂಡಿಸಿದರು. ಭಾಷಿಕವಾಗಿಯೂ ಅವರ ಪ್ರತಿಭಟನಾ ಸ್ವರೂಪವನ್ನು ಕಾಣಬಹುದು. ಪಂಡಿತ ಮಂಡಳಿ ಮೆಚ್ಚುತ್ತಿದ್ದ ಭಾಷೆ ಸಂಸ್ಕೃತವಾಗಿತ್ತು, ಜನರಾಡುವ ಮತ್ತು ಕಾವ್ಯ ರಚನೆಯ ಎರಡೂ ರೀತಿಯ ಭಾಷೆಗೆ ವ್ಯತ್ಯಾಸವಿತ್ತು. ಆದುದರಿಂದ ದೇವವಾಣಿ ಜನವಾಣಿಯಾಗಲು ಅಸಾಧ್ಯವೆಂಬುದನ್ನು ಅರಿತ ವಚನಕಾರರು ಜನವಾಣಿಯನ್ನೇ ದೇವವಾಣಿಯ ಮಟ್ಟಕ್ಕೆ ಕೊಂಡೊಯ್ದರು.

ಹರಿಹರನ ರಗಳೆಗಳಲ್ಲಿ ಮಾದಾರ ಚೆನ್ನಯ್ಯನಂತಹ ದಲಿತ ಭಕ್ತರ ಕಥೆಗಳನ್ನು ಹೇಳುವುದರ ಮೂಲಕ ಸಾಂಪ್ರದಾಯಿಕವಾಗಿ ಆಚರಣೆಯಲ್ಲಿದ್ದ ಮಡಿ ಮೈಲಿಗೆ ಮೌಢ್ಯಗಳನ್ನು ಹೋಗಲಾಡಿಸಲು ಪ್ರಯತ್ನಿಸಿದ್ದಾನೆ. ಭೀಮ ಕವಿಯ ಬಸವಪುರಾಣದಲ್ಲಿ ಶಿವಭಕ್ತರಾದ ಅಸ್ಪೃಶ್ಯ ಸಮುದಾಯದ ವರದಾನಿ ಗುಡ್ಡವ್ವೆ, ಹರಳಯ್ಯ ಮಧುವರಸಯ್ಯರ ಕಥೆ, ಮಾದಾರ ದೂಡಿ ದೇವಯ್ಯನ ಕಥೆ ಮುಂತಾದ

ಕಥೆಗಳಲ್ಲಿ ಹುಟ್ಟಿಗಿಂತ ಶಿವಭಕ್ತಿ ಮುಖ್ಯವಾಗಿದೆ. ಆ ಮೂಲಕ ಪುರೋಹಿತಶಾಹಿ ನಿರ್ಮಿತ ವ್ಯವಸ್ಥೆಯನ್ನು ತಿರಸ್ಕರಿಸುವುದನ್ನು ಕಾಣುತ್ತೇವೆ.

'ಕುಮಾರವ್ಯಾಸನ 'ಕರ್ಣಾಟಭಾರತ ಕಥಾಮಂಜರಿ'ಯಲ್ಲಿ ಪುರುಷನ ವರ್ತನೆ, ಸ್ವಭಾವಗಳನ್ನು ಪುರುಷ ಸಂಸ್ಕೃತಿಯನ್ನು ಪ್ರಶ್ನಿಸುವ ಪ್ರತಿಭಟನೆಯ ಸ್ವರೂಪವನ್ನು ಕಾಣುತ್ತೇವೆ. ದ್ರೌಪದಿಯ ಪಾತ್ರದಲ್ಲಿ ಸ್ತ್ರೀಸಂವೇದನೆ ದಟ್ಟವಾಗಿದೆ. ನಂಜುಂಡಕವಿಯ 'ರಾಮನಾತಚರಿತೆ'ಯಲ್ಲಿ ವೃದ್ಧನಾದ ಕಂಪಿಲರಾಯ ಅಧಿಕಾರದ ದರ್ಪದಿಂದ ಯುವತಿ ರತ್ನಾಜಿಯನ್ನು ವರಿಸುವನು. ಆಕೆಯಲ್ಲಿ ಅದುವರೆವಿಗೂ ಸುಪ್ತವಾಗಿದ್ದ ಪುರುಷ ಸಮಾಜದ ದಬ್ಬಾಳಿಕೆಯನ್ನು ಪ್ರತಿಭಟಿಸುವಳು.

ಮಧ್ಯಕಾಲೀನ ಕನ್ನಡ ಸಾಹಿತ್ಯದಲ್ಲಿ ತನ್ನ ವೈಚಾರಿಕ ಚಿಂತನೆ ಮತ್ತು ಕ್ರಾಂತಿಕಾರಿ ಧೋರಣೆಯಿಂದ ಗುರ್ತಿಸಲ್ಪಟ್ಟವನು ಸರ್ವಜ್ಞ, ಅವನ ವಿಮರ್ಶೆಗೆ ಒಳಗಾಗದ ವಿಚಾರಗಳು ಇಲ್ಲ. ಜಾತಿ, ಮತ, ಭಕ್ತಿ, ಸರಳತೆ, ಧಾರ್ಮಿಕ ವಿಚಾರಗಳು, ಸಾಮಾಜಿಕ ಆಚರಣೆಗಳು, ಮೌಢ್ಯ ಸಂಪ್ರದಾಯಗಳಿಗೆ ಸಂಬಂಧಿಸಿದಂತೆ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ್ದಾನೆ. ಅಸ್ಪೃಶ್ಯತೆ, ಜಾತಿಪದ್ಧತಿ, ಸನಾತನ ನಂಬಿಕೆಗಳ ವಿರುದ್ಧ ನಿರ್ಭಯವಾಗಿ ಮಾತನಾಡುವ ಇವನಲ್ಲಿ ದಲಿತ/ಬಂಡಾಯ ಸಂವೇದನೆಯ ಪ್ರತಿಭಟನೆಯಿದೆ.

ಅಸ್ಪೃಶ್ಯತೆ, ಜಾತೀಯತೆ ಹಾಗೂ ಅಪಮಾನಗಳು ಸ್ವೀಕೃತ ಅನಿವಾರ್ಯ ಮೌಲ್ಯಗಳೆಂದು ಪ್ರತಿಪಾದಿಸಿದ್ದ ವೈದಿಕ ಸಂಸ್ಕೃತಿಯ ವಿರುದ್ಧ ಪ್ರಥಮ ಬಂಡಾಯಗಾರನೆಂದರೆ ಕನಕದಾಸ. ಇವರ ಅನೇಕ ಕೀರ್ತನೆಗಳು, ರಾಮಧಾನ್ಯ ಚರಿತೆ ಎಂಬ ಖಂಡಕಾವ್ಯದಲ್ಲಿ ಪ್ರತಿಭಟನೆಯ ಧೋರಣೆಯನ್ನು ಕಾಣಬಹುದು. ರಾಮಧಾನ್ಯ ಚರಿತೆ ರಾಗಿ, ಭತ್ತಗಳ ಜಗಳದಂತೆ ಕಂಡರೂ ಮೂಲದಲ್ಲಿ ಇದು ವರ್ಗ ಸಂಘರ್ಷವನ್ನು ಕುರಿತದ್ದಾಗಿದೆ. ರಾಗಿಭತ್ತಗಳನ್ನು ರೂಪಕಗಳಾಗಿ ಬಳಸಿಕೊಂಡು ಪರೋಕ್ಷವಾಗಿ ಜಾತೀಯತೆ, ಅಸ್ಪೃಶ್ಯತೆಯ ವಿರುದ್ಧ ಬಂಡಾಯವೆದ್ದಿದ್ದಾನೆ.

ಆಧುನಿಕ ಸಂದರ್ಭದಲ್ಲಿ ಕುವೆಂಪು ಮುಂತಾದವರಲ್ಲಿ ವ್ಯವಸ್ಥೆಯ ವಿರುದ್ಧದ ಧ್ವನಿಯನ್ನು ಕಾಣಬಹುದು. ಆದರೂ ದಲಿತ/ಬಂಡಾಯದ ಪ್ರತಿಭಟನಾ ಧೋರಣೆ ಪ್ರಮುಖವಾಗಿ ಕಂಡಬರಲಿಲ್ಲ. ಆದರೆ ಪ್ರಗತಿಶೀಲರಲ್ಲಿ ಬಂಡಾಯ ಮನೋಭಾವ ಹೆಚ್ಚು ಕಂಡುಬರುತ್ತದೆ. ಅದು ನವ್ಯೋತ್ತರದಲ್ಲಿ ಒಂದು ಮೌಲ್ಯವಾಗಿ ಕಾಣಿಸಿಕೊಂಡಿದೆ. ಬಂಡಾಯಗಾರರು ಸಮಸಮಾಜ ನಿರ್ಮಾಣಕ್ಕೆ ಹೋರಾಡುವವರು. ಅವರ ಬದುಕು ಮತ್ತು ಬರೆಹಗಳಲ್ಲಿ ಸಾಮ್ಯತೆ ಕಂಡುಬರುತ್ತದೆ.

ನವ್ಯೋತ್ತರದ ಆರಂಭಿಕ ಕವಿಗಳ ಕಾವ್ಯಗಳಲ್ಲಿ ದಲಿತ ವರ್ಗಗಳ ಒಡಲಾಳದಲ್ಲಿ ಹುದುಗಿಸಿಟ್ಟ ಬೇಗುದಿ ನೋವಿನ ಅಭಿವ್ಯಕ್ತಿಯನ್ನು ಕಾಣುವೆವು. ಕಾವ್ಯಗಳ ಮೂಲಕ ಅಸಹಾಯಕತೆ ಆಕ್ರೋಶ ಸಿಟ್ಟನ್ನು ತೀವ್ರವಾಗಿ ಹೊರಹಾಕಿದವು. ಸಿದ್ದಲಿಂಗಯ್ಯನವರ 'ಅಲ್ಲೆ ಕುಂತವರೆ' ಎಪ್ಪತ್ತರ ದಶಕದ ಪ್ರಮುಖ ಖಂಡಕಾವ್ಯವಾಗಿದೆ. ಶೋಷಿತರನ್ನು ಮತ್ತಷ್ಟು ಆತಂಕದ ಬದುಕಿಗೆ ನೂಕುವ ವ್ಯವಸ್ಥೆಗೆ ಎದುರಾಗಿ ಕಾವ್ಯ ಧ್ವನಿಯೆತ್ತುತ್ತದೆ. ಕವಿಯು ಶೋಷಿತರ ದನಿಯಾಗಿ ಕಂಡುಬರುವರು. ಇವರ ಮನೆಯ ಕದವನ್ನು ಯಾರೋ ಜೋರಾಗಿ ಬಡಿದರು. ಬೂಟಿನ ಸದ್ದು, ಗುಡುಗು ಸಿಡಿಲಿನ ಸದ್ದು, ಅದರ ನಡುವೆ ಮಳೆಯಲ್ಲಿ ನೆನೆದಿರುವ ನಾಲ್ಕೈದು ಜನರು ಮನೆಯೊಳಕ್ಕೆ ನುಗ್ಗಿದರು. ಕೈ ಉಳುಕುವ ಹಾಗೆ ಥ್ಯಾಂಕ್ಸ್ ಹೇಳುವರು. ಅಪರಿಚಿತರಾಗಿದ್ದ ಕಾರಣ ಹೆದರಿಬಿಟ್ಟರು. ಆ ನಾಲ್ಕೈದು ಜನರು ಐದು ವರ್ಷಗಳ ಹಿಂದೆ ಓಟಿಗಾಗಿ ಬಂದು ಕೇರಿಯವರಿಗೆ ನೋಟನ್ನು ಹಂಚಿದ್ದವರು. ಸಾಲ ಪಡೆದು ಹಿಂದಕ್ಕೆ ಕೊಡದಿದ್ದಾಗ ಬಡಜನರ ಕೈಕಾಲು ಮುರಿಯುವವರು. ಅವರ ಮಾತು ಮೀರಿ

ನಡೆದುಕೊಳ್ಳುವ ಬಡಜನರನ್ನು ಹಿಂಸಿಸುವರು. ಅವರರಿಗೆ ಮಂತ್ರಿ ಮಾನ್ಯರ ಜೊತೆಯಲ್ಲಿ ನಿಕಟ ಸಂಪರ್ಕವಿದೆ. ಅವರನ್ನು

*"ನಾನು ಅವ್ರ ಕಾಲ್ನ ಪಟ್ಟಾಗಿ ಯಿಡ್ಡಿದ್ದೋನು*
*ಅವರ್ನೆ ದುರುಗುಟ್ಟಿಕೊಂಡ್ ನೋಡ್ದೆ"*

ಕವಿಯ ಆಕ್ರೋಶ ಮಡುಗಟ್ಟಿರುವುದನ್ನು ಕಾಣುತ್ತೇವೆ. ಕವಿಯನ್ನು ಮನೆಯಿಂದ ಆಚೆ ಹೊರಡಲು ಕೈ ಸನ್ನೆ ಮಾಡಿದರು. ಕವಿಯು ತಿರಸ್ಕರಿಸಿದಾಗ ತಕ್ಷಣ 'ನಡ್ ನಡಿಯಲೇ' ಎಂದು ಕಿರುಚಿದರು. ಅಲ್ಲದೆ ಕಾಲಿನ ಬೂಟನ್ನು ಬಾಯಿಗೆ ತುರುಕಿ 'ನೆಕ್ಕೋದ್ ಕಲ್ತೊಕೊ' ಅಂದರು. 'ನಿಮ್ಮನ್ನ ಮುಂದ್ವರ್ಸೋಕನೇ ನಾವ್ ಹುಟ್ಟಿರೋದು' ಎಂದು ಹಿಂಸೆಕೊಟ್ಟಾಗ

*"ನಾನು ಧೈರ್ಯ ಮಾಡಿ*
*ಸ್ವಾಮಿ ಬಡವರ್ ಮೇಲ್ ದಯಾ ದೇವ್ರುರ್ ಮ್ಯಾಲ್ ಭಕ್ತಿ*
*ಎಳ್ಳೂ ಇರೋ ನಿಮ್ಮಂತೋರು ಈ ತರ ಕ್ವಲೆ*
*ಮಾಡ್ಬ್ಯಾಡಿ ನನ್ ಬುಟ್ ಬುಡಿ"*

ಎಂದು ಬೇಡಿಕೊಳ್ಳುವ ಸ್ಥಿತಿ ಕವಿಗೆ ಮಾತ್ರವಲ್ಲ ತಾವು ಪ್ರತಿನಿಧಿಸುವ ಸಮುದಾಯದವರ ಆರ್ತ ಧ್ವನಿಯಾಗಿದೆ.

*"ನನ್ ಮೂಳೇನ ಇವ್ರ ಬೂಟ್ಗಳು*
*ತುಳ್ದು ಪುಡ್ ಪುಡಿ ಮಾಡ್ತಾ ಅವೆ*
*ನನ್ಗೆ ರೋಸೋಯ್ತು*
*ಕಲ್ತಿದ್ದು ಕೇಳಿದ್ದು ಯಲ್ಲಾ ಮರ್ತೋಗಿ*
*ಉಳ್ಕೊಂಡಿತ್ತೊಂದೇ ಮಾತು*
*'ಧಿಕ್ಕಾರ ಧಿಕ್ಕಾರ'"*

ನಾಲ್ಕೈದು ಜನರ ಹಿಂಸೆಗೆ ಗುರಿಯಾದ ಕವಿ ವಿಚಲಿತರಾಗುವರು. ದಮನಿತರ ಪರವಾಗಿ ಹೋರಾಡುವವರು ಆ ನಿಟ್ಟಿನಲ್ಲೇ ಪ್ರತಿಕ್ರಿಯಿಸಬೇಕಾಗುವುದು. ಅವರು ಕಲಿತ ಎಲ್ಲಾ ಪಟ್ಟುಗಳಿಂದ ಬಿಡಿಸಿಕೊಳ್ಳಲು ಪ್ರಯತ್ನಪಟ್ಟು ವಿಫಲರಾದಾಗ ಉಳಿದುಕೊಂಡದ್ದೆಂದರೆ 'ಧಿಕ್ಕಾರ ಧಿಕ್ಕಾರ' ನಾಲ್ಕೈದು ಜನರು ಹೆದರುವ ಹಾಗೆ ಕೂಗಿದರು. 'ಧಿಕ್ಕಾರ' ಪದಕ್ಕೆ ವ್ಯವಸ್ಥೆಯನ್ನು ಬದಲಾಯಿಸುವ ಶಕ್ತಿಯಿದೆ. 'ಬಡವನೆದ್ದರೆ ಒಡವ' ಎಂಬ ಮಾತಿದೆ. ಬಡವರ ಬಗ್ಗೆ ಉದಸೀನ ಮಾಡಿದ್ದ ಅವರು ಹೆದರಿದರು. ಹಿಂಸೆಯ ಪರಿಕರಗಳಾದ ಕತ್ತಿ ಚಾಕು ಬಾಕು ಬಂದೂಕುಗಳನ್ನು ತೋಟದ ಮನೆಗಳಲ್ಲಿ ಅಕ್ರಮವಾಗಿ ಸಂಗ್ರಹ ಮಾಡುವ ಶ್ರೀಮಂತರ ನಡವಳಿಕೆಯನ್ನು ಕಾವ್ಯ ಖಂಡಿಸುವುದು. ಬಡವರು ನಿತ್ಯ ಅನುಭವಿಸುತ್ತಿರುವ ನೋವು ಸಂಕಟ ಈ ಖಂಡಕಾವ್ಯದಲ್ಲಿ ದಟ್ಟವಾಗಿದೆ.

ಚೆನ್ನಣ್ಣ ವಾಲೀಕಾರರ ಕಾಡೂರ ಬೀಜನ ಲಾವಣಿ ಪ್ರಮುಖ ಖಂಡಕಾವ್ಯವಾಗಿದೆ. ಅಜ್ಞಾನ ಹಾಗೂ ಅಸಹಾಯಕರಾಗಿ ತಮ್ಮ ಬದುಕನ್ನು ಅಂಜಿಕೆ ಕೀಳರಿಮೆಯಿಂದ ದೂಡುತ್ತಿದ್ದ ಶೋಷಿತರಿಗೆ ಭರವಸೆಯ ಬೆಳಕಾದವನು ಕಾಡೂರ ಬೀಜ. ಶೋಷಿಸುತ್ತಿರುವವರ ವಿರುದ್ಧ ದನಿ ಇಲ್ಲದವರಲ್ಲಿ ದನಿ ಎತ್ತರಿಸಿ ದಿಕ್ಕಾರ ಕೂಗಿಸಿ ದಿಕ್ಕು ತೋರಿದವನು.

***"ಧಿಕ್ಕಾರ। ಧಿಕ್ಕಾರ***
***ಬಡವರ। ಧಿಕ್ಕಾರ***
***ನೆಲೆಮುಗಿಲು ತುಂಬಿ। ನಿಂತಾವಣ್ಣ***
***ಸೊಕ್ಕಿದ । ಜನಗೋಳ***
***ಪಕ್ಕೆಲವು । ಮುರಿಯುತ್ತ***
***ಎಲ್ಲಿ ನೋಡಿದರಲ್ಲಿ । ಎದ್ದಾವಣ್ಣ"***

ಕಾಲಕಾಲಕ್ಕೆ ಸಮಾಜವನ್ನು ಜಾಗೃತಗೊಳಿಸಲು ಕಾಡೂರ ಬೀಜನಂತವರು ಹುಟ್ಟಬೇಕು. ಖಂಡಕಾವ್ಯದ ಆಶಯವನ್ನು ಕವಿ ಕಾವ್ಯನಾಯಕನ ಹಿನ್ನೆಲೆಯಲ್ಲಿ ವ್ಯಕ್ತಪಡಿಸುವರು. ಬಡವರಾಗಿ ಉಳಿದ ಜನರನ್ನು ಜಾಗೃತಗೊಳಿಸುವ, ಅಗತ್ಯವಿದ್ದಾಗ ವ್ಯವಸ್ಥೆಯನ್ನು ಪ್ರತಿರೋಧಿಸುವ ಮನೋಭಾವವನ್ನು ಕಲಿಸಿ ಕೊಟ್ಟಿದ್ದಾನೆ. ಶೋಷಕ ವರ್ಗವನ್ನು ವಿಚಲಿತಗೊಳಿಸುವ ಕೆಲಸವನ್ನು ತನ್ನ ಸಮುದಾಯದ ಮೂಲಕ ಕಾಡೂರಬೀಜನು ಮಾಡಿದ್ದಾನೆ.

ತನ್ನ ಊರಿನಲ್ಲಿ ಮೇಲ್ಜಾತಿಯವರಿಗೆ ಯಾವ ಪ್ರತಿಫಲವಿಲ್ಲದೆ ಕೆಲಸ ಮಾಡಿಕೊಡುತ್ತಿದ್ದ ಆದರೆ ತಮ್ಮ ಊರಿಗೆ ಶಾಲೆ ಬಂದ ನಂತರ ಅಕ್ಷರಗಳು ಅವನ ನಾಲಗೆಯಲ್ಲಿ ಓಡಾಡುತ್ತವೆ. ಹೊಸ ಮನುಷ್ಯನಾಗಲು

***"ಬಿಟ್ಟಿ ಮಾಡೋದು ಬಿಟ್ಟ । ಕಾ । ಕೂಲಿ ಮಾಡೋದು ಬಿಟ್ಟ***
***ಗುಲಾಮತನವು ಬಿಟ್ಟ । ಕಾ । ಸಲಾಮ್ ಹೊಡಿವದು ಬಿಟ್ಟ***
***ಮಂದಿಯೊಳಗೆ ಮನುಷ್ಯ । ಕಾ । ಆಗ್ಲಾಕ ಹೊಂಟಾನ***
***ತನ್ನ ಕಷ್ಟಕ್ಕರ್ಥ । ಕಾ । ಹುಡುಕ್ಯಾನ ತಡಕ್ಯಾನ***
***ಮನುಷ್ಯನಾಗುವ ಹಾದಿ । ಕಾ । ಮಾಡ್ಯಾನ ಮಟ್ಯಾನ"***

ಕಾಡೂರ ಬೀಜನನ್ನು ಅಕ್ಷರ ಜ್ಞಾನ ಹೊಸ ಮನುಷ್ಯನನ್ನಾಗಿ ಮಾಡಿತು. ಊರಿನಲ್ಲಿ ತನಗಾಗುತ್ತಿದ್ದ ತಾರತಮ್ಯದ ವಿರುದ್ಧ ಪ್ರತಿಭಟಿಸುವ ಧೈರ್ಯ ತಾಳಿದನು. ತಾನೂ ಒಬ್ಬ ಮನುಷ್ಯ, ತನ್ನಂತೆ ಪರರು ಎಂದು ತಿಳಿದುಕೊಳ್ಳುವಷ್ಟು ಸಾಮಾನ್ಯಜ್ಞಾನ ಅವನಿಗೆ ಬರಲು ಕಾರಣ ಕಾಡೂರಿನಲ್ಲಿ ತೆರೆದ ಶಾಲೆ. ತನ್ನ ಜನರೂ ವಿದ್ಯೆಯನ್ನು ಕಲಿಯಲಿ ಎಂದು ಬಯಸಿದ್ದಾನೆ. ತನ್ನ ಜನರ ಅಂಜಿಕೆ ಕಳೆಯಲು ಪ್ರತಿ ಸಂಜೆಯಲ್ಲಿ ತನ್ನ ಓಣಿಯ ಜನರನ್ನು ಶಾಲೆಯ ಬಳಿ ಕೂರಿಸಿಕೊಂಡು ದುಡಿಮೆಗೆ ತಕ್ಕ ಪ್ರತಿಫಲವಿಲ್ಲದೆ ಚಪ್ಪಲಿ ಒಲಿಯುವುದು, ಉಳುಮೆಗೆ ಹೋಗುವುದು, ಹಲಗೆ ಬಾರಿಸುವುದು, ಕಣ ಮಾಡುವುದು, ಕೊಟ್ಟಿಗೆ ಸಗಣಿ ಹೊರುವುದು ಯಾವುದನ್ನೂ ಮಾಡಬೇಡಿ ಎಂದು ಮನವರಿಕೆ ಮಾಡಿಕೊಡುವನು. ಮೇಲ್ಜಾತಿಯವರು ಹೆಣ್ಣಿಗೆ, ದುಡ್ಡಿಗೆ, ಚಹಾ ಚುಟ್ಟಕ್ಕೆ, ಸೇಂದಿ ಸರಾಯಿಗೆ, ಜೋಳ ಬೇಳೆಗೆ, ಒಡಕು ಮೂಡಿಸವ ಕುತಂತ್ರವನ್ನು ಮಾಡುತ್ತಿರುತ್ತಾರೆ. ಎಚ್ಚರಿಕೆಯಿಂದ ಇರಬೇಕು. ಗೌಡರು ಕುಲಕರ್ಣಿಯವರು ಹೇಳಿದ್ದನ್ನು ಕೇಳಿ ಹಲವು ಮಂದಿ ಜೈಲು ಸೇರಿದ್ದಾರೆ. ಇನ್ನಾದರೂ ಅನ್ಯ ಮಾತುಗಳಿಗೆ ಕಿವಿಗೊಡದಿರಿ ಎಂದು ಯುವ ಸಮೂಹವನ್ನು ಜಾಗೃತಿಗೊಳಿಸಿದನು. ತಮ್ಮ ಇಂದಿನ ಸ್ಥಿತಿಗೆ ಮೇಲ್ಜಾತಿಯವರ ಹುನ್ನಾರವೇ ಕಾರಣ ಎಂಬುದನ್ನು ಎಲ್ಲರೂ ತಿಳಿದುಕೊಂಡರು. ಹೊಲಗೇರಿ ಮಾದರಕೇರಿ ಯುವಕರು ಸಮನಾಗಿ ಬಾಳಲು ತಿಳುವಳಿಕೆ ಮೂಡಿಸಿದನು.

*"ಕಾಡಿಗ್ಹತ್ತಿದ ಉರಿಯೂ ಒಡಲಿಗತ್ತಿದ ಉರಿಯೂ*
*ಮನೆಗೆ ಹತ್ತಿದ ಉರಿಯೂ ಮನಕೆ ಹತ್ತಿದ ಉರಿಯೂ*
*ಉರಿಹತ್ತಿಕೊಂಡಾದ ಹೊಗಿ ಆಗಿ ಹೋಗ್ಯಾದ*
*ಧಗಧಗಾ ಆಗ್ಯಾದ ನೆಲಮುಗಿಲು ಆಗ್ಯಾದ*
*ಎಲ್ಲಾ ಹೆಣ್ಣು ಗಂಡು ಕೇಳ್ದಂಗ ಕೇಳ್ದಂಗ*
*ಸಿಡಿಲಾಗಿ ಹೋಗ್ಯಾರ ಕಡಲಾಗಿ ಉಕ್ಯಾರ"*

ಚಹಾ ಚುಟ್ಟಕ್ಕೆ, ಸೇಂದಿ ಸಾರಾಯಿಗೆ ಗೌಡ ಕುಲಕರ್ಣಿಯರಿಗೆ ಗುಲಾಮರಾಗುವುದನ್ನು ತಡೆದನು. ದಲಿತ ವರ್ಗದ ಎಲ್ಲರೂ ಬೀಜನ ಮಾತಿನಲ್ಲಿ ನಂಬಿಕೆ ತಾಳಿದರು. ಹಿಂದೆ ತಮ್ಮ ದುಃಖ ನೋವುಗಳಿಗೆ ಮೇಲ್ಜಾತಿಯವರೆ ಕಾರಣವಾಗಿರುವುದನ್ನು ನೆನೆದು ಕುಡುಗೋಲು, ಬಂದೂಕುಗಳಾಗಿ ಪರಿವರ್ತನೆಯಾಗಿದ್ದಾರೆ.

*"ಬಡವರ । ಬ್ಯಾನಿಯು*
*ಭರ್ಚ್ಯಾಗಿ । ಬಡಿಗ್ಯಾಗಿ*
*ನೆಲಮುಗಿಲು ತುಂಬ್ಕೊಂಡು । ನಿಂತಾರಣ್ಣ*
*ನೊಂದವರ । ಬೆಂದವರ*
*ಒಡಲೀಗಿ । ಅಮೃತ*
*ಸುರಿಲಿಕ್ಕೆ ರಕ್ತಾವು । ಹರಸ್ಯಾರಣ್ಣ"*

ಬಡವರು ಅನುಭವಿಸಿದ ಯಾನಾಮಯ ಬದುಕನ್ನ ಬೀಜನ ಮೂಲಕ ಅರ್ಥಮಾಡಿಕೊಂಡ ಜನತೆ ಮೇಲ್ಜಾತಿಯವರು ಮಾಡಿದ ಶೋಷಣೆಯನ್ನು ನೆನೆದು ತಮ್ಮ ದುಃಖ ನೋವುಗಳಿಗೆ ಮೇಲ್ಜಾತಿಯವರೆ ಕಾರಣವಾಗಿದ್ದು ಕುಡುಗೋಲು, ಬಂದೂಕು ಮುಂತಾದ ಆಯುಧಗಳಾಗಿ ಪರಿವರ್ತನೆಯಾಗಿದ್ದಾರೆ. ಊರಿನ ಇತಿಹಾಸವನ್ನು ಹೊಸದಾಗಿ ಬರೆಯಬೇಕಾಗಿದೆ. ವೇದಗಳು, ಉಪನಿಷತ್ತು, ರಾಮಾಯಣ, ಮಹಾಭಾರತ ಬರೆದವರು ಮೇಲ್ಜಾತಿಯವರಲ್ಲ. ಅವುಗಳೆಲ್ಲ ಶ್ರಮಿಕವರ್ಗದ ಕೊಡುಗೆಗಳಾಗಿವೆ. ಬೇಲೂರು, ಹಳೆಬೀಡು, ಅಜಂತಾ, ಎಲ್ಲೋರ ಮುಂತಾದ ಕೋಟೆಕೊತ್ತಲ ಕಟ್ಟಿದವರು ಶ್ರಮಿಕರು. ಹಾಗಾಗಿ ಶ್ರಮಿಕರ ಕೈಗೆ ಅಧಿಕಾರ ಸಿಗಬೇಕೆಂಬ ಆಶಯವನ್ನು ಗುರುತಿಸಬಹುದು. ಹೀಗಿರುವಾಗ ಗೌಡನ ಮಡದಿ ಮರಣ ಹೊಂದಿದಾಗ ಪೂರ್ವಾಲೋಚನೆ ಮಾಡಿ ಸುದ್ದಿ ಮುಟ್ಟಿಸಿದರು, ಕುಣಿ ಹೊಡೆದರು, ಹಲಗೆ ಬಡಿದರು, ಯಾವುದೇ ಸಮಭಾವನೆಯನ್ನು ಗೌಡ ಕೊಡಲಿಲ್ಲ. ಮತ್ತೊಂದು ದಿನ ಮೇಲ್ಜಾತಿಯ ಮತ್ತೊಬ್ಬರು ಮರಣ ಹೊಂದಿದಾಗ ಹೊಲೆಮಾದಿಗರು ಯಾರೂ ಸುದ್ದಿ ಮುಟ್ಟಿಸಲಿಲ್ಲ, ಕುಣಿ ಹೊಡೆಯಲಿಲ್ಲ, ಹಲಗೆ ಬಾರಿಸಲಿಲ್ಲ.

*"ಬ್ಯಾರ್ ಬ್ಯಾರೆ ಊರೀಗೆ । ದುಡಿಲಾಕ ಹೋಗ್ಯಾರ*
*ಕೆಲಸಾಕ ಹೋಗ್ಯಾರ । ಮನುಷ್ಯಾಗಕತ್ಯಾರೆ*
*ಸುದ್ದೀಯು ಹೇಳ್ಳಿಲ್ಲ । ಕುಣೆಯೂನು ಹೊಡಿಲಿಲ್ಲ*
*ಹಲಗೀಯು ಬಡಿಲಿಲ್ಲ । ಹೇಳ್ದಂಗ ಕೇಳ್ಲಿಲ್ಲ*
*ಕುಣಿ ತಾವೆ ಹೊಡಿದಾರ । ಸುದ್ದಿ ಹೇಳ್ಳೆ ಬಂದಾರ"*

ಹೊಲೆಮಾದಿಗರು ಯಾರೂ ಸುದ್ದಿ ಮುಟ್ಟಿ ದಲಿತರೆಲ್ಲ ದುಡಿಯಲು ಬೇರೆ ಊರಿಗೆ ಹೋದರು. ದಲಿತರು ಬೀಜ ಹೇಳಿದಂತೆ ಕೇಳುತ್ತಿದ್ದಾರೆಂದು ಮತ್ಸರ ಬೆಳಸಿಕೊಂಡರು. ಬೆವರಿಲ್ಲದೆ ಬೆಣ್ಣೆ ತಿನ್ನುವ ಜನರು ಸುಖ ತಪ್ಪಿದಾಗ ಸಿಡಿದೆದ್ದಿದ್ದಾರೆ. ಇಷ್ಟು ದಿನ ಆರ್ಯರು ತಮಗೆ ಬೇಕಾದಂತೆ ಬರೆದಿದ್ದಾರೆ. ಹೊಸ ಅಕ್ಷರಗಳನ್ನು ಶ್ರಮಿಕರು ಬರೆಯಬೇಕಾಗಿದೆ ಎನ್ನುತ್ತಾರೆ ಕವಿ.

ಮೇಲ್ಜಾತಿಯವರು ಕೆಳಜಾತಿಯವರ ವಿರುದ್ಧ ದ್ವೇಷವನ್ನು ಸಾಧಿಸುತ್ತಲೇ ಇದ್ದರು. 'ಉಳ್ಳವರ ಜೀವವೆಂದರೆ ಆನೆಯ ಹಾಗೆ, ಬಡವರ ಜೀವವೆಂದರೆ ಇರುವೆಯ ಹಾಗೆ' ಬೀಜನು ಊರಿನಲ್ಲಿ ಇಲ್ಲದಾಗ ಸಾಹುಕಾರ ಮಾದರ ಮಲ್ಲನ ಹೆಂಡತಿಯನ್ನು ಹತ್ಯೆ ಮಾಡಿದನು. ಮಲ್ಲನ ಹೆಂಡತಿಯ ಹತ್ಯೆ ನಡೆದು ಮಣ್ಣು ಮಾಡಲಾಗಿತ್ತು. ಘಟನೆಯ ವಿವರವನ್ನು ತಿಳಿದುಕೊಂಡ ಬೀಜನು ಸಾಹುಕಾರನಿಗೆ ಪ್ರತಿಯೇಟು ಕೊಡಲು ನಿರ್ಧರಿಸಿದನು.

*"ಜನಗಳಿಗೆಬಿಸ್ಯಾನ । ಏಟಿಗೇಟಂದಾನ*
*ಕೇರಿಗೆ ಕೇರಿಯೇ । ಗುಡುಗ್ಯಾಕಿ ಹೊರಟಾದ*
*ಪೊಲೀಸರು ಗಡಗಡಾ । ನಡುಗಿ ಹೋಗ್ಯಾರಪ್ಪ*
*ಹೋಳಿದ ಹೆಣವನ್ನು । ತೆಗ್ದಾರ ನೋಡ್ರೆಪ್ಪ*
*ಸಾವ್ಕಾರ ಮೆಟ್ಟೀಲಿ । ಹೊಡೆದದ್ದು ಖರೆಯಾಯ್ತು"*

ಕಾಡೂರ ಬೀಜನು ಇಲ್ಲದಾಗ ನಡೆದ ಈ ಘಟನೆಯ ಬಗ್ಗೆ ವಿವರವಾಗಿ ತಿಳಿದು ತನ್ನ ಸಮುದಾಯವನ್ನು ಸಂಘಟಿಸಿದಾಗ ಕೇರಿಗೆ ಕೇರಿಯೇ ಗುಡುಗಿತು. ಪ್ರತಿಭಟಿಸಿದಾಗ ಪೊಲೀಸ್ ಇಲಾಖೆಯು ಹೆದರಿತ್ತು. ಹೆಣವನ್ನು ಹೊರತೆಗೆಸಿ ನೋಡಿದಾಗ ಗೌಡ ಹೊಡೆದು ಸಾಯಿಸಿರುವುದು ದೃಢಪಟ್ಟಿತು. ಸಾಹುಕಾರನನ್ನು ಕಲಬುರ್ಗಿ ಜೈಲಿನಲ್ಲಿಟ್ಟರು. ಕಾನೂನಿನ ಮುಂದೆ ರಾಜಿಯ ಮಾತು, ಹಣದಬಲ ಯಾವುದೂ ಕೆಲಸಕ್ಕೆ ಬಾರಲಿಲ್ಲ. ಇದರಿಂದ ಅಸಹನೆಗೆ ಈಡಾದ ಮೇಲ್ಜಾತಿಯವರು ಹೊಲೆಮಾದಿಗರ ಬೆನ್ನುಬಿದ್ದು ಊರು ಬಿಡಿಸಲು ಸಂಚು ಮಾಡಿದರು.

*"ಬುದ್ಧಿಗೆಟ್ಟಾರವರು । ರಾಗ್ಚೆಸಾಗ್ಯಾರವರು*
*ಗಾಸ್ಲೇಟೆಣ್ಣೆಯು ತರಸಿ । ಸುರುವಿ ಬಿಟ್ಟಾರವರು*
*ನಟ್ಟನಡುರಾತ್ರ್ಯಾಗ । ಕಡ್ಡಿಗೀರ್ಯಾರವರು*
*ಧಗಧಗ್ಗ ಧಗಧಗ್ಗ । ಗುಡ್ಲಿಮನಿಗೋಳಲ್ಲಿ*
*ಬೆಂಕಿ ಉರಿವೊದು ನೋಡಿ । ಜನವು ಸುಡುವುದು ನೋಡಿ*
*ಧರ್ಮ ದೇವರು ಜನರು । ಒಬ್ಬರೂ ಬರಲಿಲ್ಲ*
*ಒಳಗಿದ್ದ ಜನರೆಲ್ಲ । ಸುಟ್ಟುಹೋಗ್ಯಾರಪ್ಪ"*

ಶಿಕ್ಷೆಯು ಮುಗಿದ ಸಾಹುಕಾರ ಊರಿಗೆ ಬಂದನು. ದ್ವೇಷದ ಕಿಚ್ಚು ಅವನಲ್ಲಿತ್ತು. ಜಾತಿ ಜಾತಿಗಳನ್ನು ಎತ್ತಿಕಟ್ಟುವ ಕೆಲಸ ಮಾಡಿದನು. ಹೊಲೆಮಾದಿಗರನ್ನು ಬದುಕಲು ಬಿಡಬಾರದು ಅವರನ್ನು ಸುಟ್ಟುಬಿಡಬೇಕು ಎಂದು ಒಳಸಂಚು ಮಾಡಿ ನಡುರಾತ್ರಿಯಲ್ಲಿ ಕೆಳಗೇರಿಯ ಹೊಲೆಮಾದಿಗರ ಗುಡಿಸಲುಗಳಿಗೆ ಬೆಂಕಿಯಿಡುವ ರಾಕ್ಷಸೀ ಕೃತ್ಯ ಮಾಡಿದರು. ಪೆಟ್ರೋಲ್ ಸುರಿದು ಹಚ್ಚಿದ ಬೆಂಕಿಗೆ ದನಕರುಗಳು ಮಾತ್ರವಲ್ಲ ಒಳಗಿದ್ದ ಜನರೂ ದಹಿಸಿದರು. ಆಕ್ರಂಧನ ಮುಗಿಲುಮುಟ್ಟಿತು. ಹೆಣಗಳು

ಚೆಲ್ಲಾಪಿಲ್ಲಿಯಾಗಿ ಬಿದ್ದವು. ಪೂಜಿಸುವ ದೇವರಾಗಲಿ ಆರಾಧಿಸುವ ಧರ್ಮವಾಗಲಿ ಯಾವುದೂ ಅವರನ್ನು ಉಳಿಸಲಿಲ್ಲ. ಕೆಳಗೇರಿ ಪೂರ್ತಿ ಸುಟ್ಟುಹೋಗಿ ಸ್ಮಶಾನದಂತಾಯಿತು. ಕೆಲವರು ಊರಿನಿಂದ ಓಡಿಹೋದರು.

ಹುಲಿಯಾಗಿ ಆರ್ಭಟಿಸಿದ ಸಿಟ್ಟು ಅವನಲ್ಲಿ ಕರಗಿಹೋಯಿತು. ಕೆಳಗೇರಿ ಸುಟ್ಟು ಹೋಯಿತು ಇದಕ್ಕೆ ಕಾರಣವಾದ ಮೇಲ್ಜಾತಿ ಕೇರಿ ನಡುಗಿ ಹೋಯಿತು. ಈ ಎರಡೂ ಘಟನೆಗಳು ತನ್ನ ಊರಿನವೇ ಎಂದು ವ್ಯಥೆಪಟ್ಟನು. ಜೀವಪರ ಕಾಳಜಿ ಅವನಲ್ಲಿ ಅಂಕುರಿಸಿತು. ತಾನು ಹುಟ್ಟಿದ ಊರು ಹಾಳಾಗುವುದು ಬೀಜನಿಗೆ ಇಷ್ಟವಿರಲಿಲ್ಲ. ಪೊಲೀಸರ ವಶದಲ್ಲಿದ್ದ ಮೇಲ್ಜಾತಿಯವರನ್ನು ಬಿಡಿಸಿಕೊಂಡು ಬಂದಿದ್ದಾನೆ. ಜಾತಿ ಸಂಘರ್ಷದಲ್ಲಿ ನಲುಗಿದ್ದ ಕಾಡೂರು ಬೀಜನಿಂದ ಸಹಬಾಳ್ವೆ ಮಾಡಲು ಎಲ್ಲ ಸಮುದಾಯವೂ ಒಪ್ಪಿತು. ಸರ್ಕಾರ ಮತ್ತು ಪೊಲೀಸ್ ಇಲಾಖೆಗೆ ಸಮಸ್ಯೆಯಾಗಿ ಕಾಡಿದ್ದ ಈ ಘಟನೆ ಬೀಜನ ತಿಳುವಳಿಕೆಯಿಂದಾಗಿ ಸಂಘರ್ಷವು ನಿಂತಿತು.

"ಸ್ಥಾಪಕ ವ್ಯವಸ್ಥೆಗೆ ದೀರ್ಘಕಾಲದ ಚರಿತ್ರೆ ಇರುವಂತೆಯೇ ಅದರ ಪ್ರತಿರೋಧದ ಹೋರಾಟಗಳಿಗೂ ಅಷ್ಟೇ ದೊಡ್ಡ ಚರಿತ್ರೆಯಿದೆ. ಶೋಷಣೆ ಯಾವ ಕಾಲದಲ್ಲಿ ಹುಟ್ಟಿತೋ ಪ್ರತಿರೋಧಗಳು ಅದರ ಜೊತೆಯಲ್ಲಿ ಹುಟ್ಟಿಕೊಂಡಿವೆ. ಆ ಪ್ರತಿರೋಧದ ಬಹುರೂಪಗಳನ್ನ ಸಾಮಾಜಿಕ, ಸಾಂಸ್ಕೃತಿಕ ಹಾಗೂ ಧಾರ್ಮಿಕ ಆಯಾಮಗಳಿಂದ ವಿಶ್ಲೇಷಿಸಿಕೊಂಡರೆ ಹೋರಾಟದ ಬಹುದೊಡ್ಡ ಸಂಕಥನವೇ ನಮ್ಮೆದುರು ತೆರೆದುಕೊಳ್ಳುತ್ತದೆ" ನಾವು ಸಮಕಾಲೀನ ಸಂದರ್ಭದಲ್ಲಿ ಕಾಣುತ್ತಿರುವ ವ್ಯವಸ್ಥೆಯ ವಿರುದ್ಧ ಹೋರಾಟವನ್ನು ಪುರಾಣ ಕಾಲದಿಂದಲೂ ಗುರ್ತಿಸಲು ಸಾಧ್ಯವಿದೆ. ಈ ಖಂಡಕಾವ್ಯದಲ್ಲಿ ಪ್ರತಿರೋಧದ ನೆಲೆಗಳನ್ನು ಕಾಣುತ್ತೇವೆ.

ಸತ್ಯವ್ರತ ಪಟ್ಟಾಭಿಷಿಕ್ತನಾದ ನಂತರ ರಾಜಸಭೆಯಲ್ಲಿ ಪ್ರಾಜ್ಞರು ಪಂಡಿತ ಪಾಮರರು ಧರ್ಮಜ್ಞರು ಕಲಾಕೋವಿದರು ಸೇರಿದ್ದ ಸಭೆಯಲ್ಲಿ ಚೋದ್ಯದ ಸಂಗತಿಯೊಂದು ನಡೆಯಿತು. ಕಾಕ ಗೊರವಂಕ ಕೊಕ್ಕರೆ ಪಾರಿವಾಳಗಳಲ್ಲಿ ಕಾಗೆ ಚಾಂಡಾಲರಿಗೆ ಸಮ. ಅವರಿಗೆ ಸ್ವರ್ಗ ದಕ್ಕದು ಎಂಬ ಚರ್ಚೆ ನಡೆದಾಗ ಅದನ್ನು ಸತ್ಯವ್ರತ ವಿರೋಧಿಸುತ್ತಾನೆ.

***"ಚಂಡಾಲರ್ ಮನುಜರಲ್ಲರೇಂ?***

***ಚಾಂಡಾಲಕುಲ ಪರಿಸರ ಪರಿವಾರಮೆಲ್ಲಂ ಚಾಂಡಾಲಮಯಂ***

***ತನ್ನಿಮಿತ್ತಂ ಚಾಂಡಾಲಂಗಿತ್ತ ನಿಷೇಧಂ ಆ ಸರ್ವಸಂಕುಲಕಕ್ಕುಂ***

***ಪಾಪಿಗಿಂ ಪಾಪಿಪರಿವಾರದೊಳಿರ್ಪವಂ ಕಡುಪಾಪಿಗಂ***

***ಮನುಜ ಮನುಜರಂ ಭೇದಿಪ ನೀತಿ ಅದೆಂತಪ್ಪ ನೀತಿಯೈ"***

ಪಂಡಿತ ಪ್ರಾಜ್ಞರ ವಿರುದ್ಧ ಸತ್ಯವ್ರತ ಧನಿಯೆತ್ತುತ್ತಾನೆ. ಚಾಂಡಾಲರು ಮನಿಷ್ಯರಲ್ಲವೇ? ತನ್ನಿಂದಾಗಿ ಚಾಂಡಾಲರಿಗೆ ಸ್ವರ್ಗ ನಿಷಿದ್ಧ ಎಂಬ ಸ್ಥಾಪಿತ ವ್ಯವಸ್ಥೆಯನ್ನು ಪ್ರತಿಭಟಿಸುತ್ತಾನೆ. ಮನುಷ್ಯ ಮನುಷ್ಯರನ್ನು ಬೇರ್ಪಡಿಸುವ ನೀತಿ ಅದೆಂತಹ ನೀತಿ ಪಂಡಿತ ವರ್ಗವನ್ನು ಪ್ರಶ್ನಿಸುತ್ತಾನೆ. ತಾನು ರಾಜನಾಗಿದ್ದರೂ ಸಮಾಜ ನಿರ್ಮಿಸಿದ ವ್ಯವಸ್ಥೆಯೊಳಗೆ ತಾನು ಎಷ್ಟು ಅಸಹಾಯಕನೆಂಬ ಖೇದ ವ್ಯಕ್ತಪಡಿಸುತ್ತಾನೆ. ಈ ನೀತಿ ಹುಸಿಯೆಂದು ಸಾರುವುದಕ್ಕೆ ಏನು ಮಾರ್ಗವಿದೆ ಎಂಬ ಆಚಲೋಚನೆ ಮಾಡಿ 'ಶತಯಾಗ' ವನ್ನು ಮಾಡುವ ಅನಂತರ ಸಶರೀರ ಸ್ವರ್ಗ ಸೇರುವ ಬಯಕೆಯನ್ನು ವಶಿಷ್ಠರ ಮುಂದೆ

ವ್ಯಕ್ತಪಡಿಸುತ್ತಾನೆ. ಸನಾತನ ವ್ಯವಸ್ಥೆಯ ಪಡಿಯಚ್ಚಾಗಿರುವ ವಶಿಷ್ಠರು ಒಪ್ಪುವುದಿಲ್ಲ. 'ಅಶಕ್ಯಮಿತಿಚಾಪ್ಯುಕ್ತಃ' ಎಂದು ಇಕ್ಷ್ವಾಕು ಕುಲದ ಸತ್ಯವ್ರತನನ್ನು ಸರ್ವಕಾಲದಲ್ಲೂ ಹಾಡಿ ಹೊಗಳಿದ್ದರು. ಆದರೆ ಸತ್ಯವ್ರತನ ಇಂಗಿತವನ್ನು ವಶಿಷ್ಠರು ಒಪ್ಪುವುದಿಲ್ಲ. ಗುಣಗ್ರಾಹಿ, ನಿಸ್ವಾರ್ಥಿ, ನಿರಪೇಕ್ಷಿ ಎಂದು ಸತ್ಯವ್ರತನಿಗೆ ವಶಿಷ್ಠರು ಹೇಳಿದ್ದರು. ಅಲ್ಲದೆ ಭೂಮಿಯ ಮೇಲೆ ಜನಹಿತವನ್ನು ಮೀರಿ ವಿಧಿ ನಿಷೇಧಗಳು ಹುಟ್ಟುವುದಿಲ್ಲ. ಎಂದು ವಶಿಷ್ಠರ ನಿಲುವನ್ನು ಖಂಡಿಸುತ್ತಾನೆ.

ವಡ್ಡಗೆರೆ ನಾಗರಾಜಯ್ಯನವರ ಆಸಾದಿ ತಳಸಮುದಾಯದ ಪರಂಪರೆಯನ್ನು ಪ್ರತಿಬಿಂಬಿಸುವ ಖಂಡಕಾವ್ಯ. ಆಸಾದಿಗಳು ಯಜಮಾನ ಸಂಸ್ಕೃತಿಯನ್ನು ನಿರಾಕರಿಸುವರು. ಆಳುವ ವರ್ಗಗಳ ಜನವಿರೋಧಿ ಮೌಲ್ಯಗಳನ್ನು ಖಂಡಿಸಲು ಆಚರಣೆ ಮತ್ತು ಭಂಡಪದಗಳ ಮೂಲಕ ಧಣಿಗಳ ಎದುರು ವ್ಯವಸ್ಥೆಯ ವಿರುದ್ಧ ಸಾಂಸ್ಕೃತಿಕ ದಂಗೆ ಎದ್ದು ಸಾಮಾಜಿಕ ನ್ಯಾಯಕ್ಕಾಗಿ ಆಗ್ರಹಿಸುವ ಬಂಡಾಯಗಾರರು.

***"ಇವುಳ ನಾಲಿಗೆ ಮೇಲೆ ನಾರುಣ್ಣು ಏಳ***

***ಇವುಳಿಗೆ ಬರಬಾರದ್ದು ಬರ***

***ಇವುಳು ಹೋದ್ದಾರಿವೊಳಗೆ***

***ಕರಿನಾಗರ ಹಾವು ಕಡಿಯ***

***ಇವುಳ ವಂಸ ಹಾಳಾಗ್ಹೋಗ***

***ಇವುಳ್ನ ಹೆತ್ತೋರ್ಹೊಟ್ಟೆಗೆ ಬೆಂಕಿ ಬೀಳ***

***ನನ್ಹೊಟ್ಟೆ ಉರಿದಂಗೆ ಅವರ್ಹೊಟ್ಟೆ ಉರಿಯ***

***ಇವುರ ನಾಲಿಗೆ ಸೇದಿ ಸದ್ದಡಗ"***

ಯಜಮಾನ ಸಂಸ್ಕೃತಿಯ ಜೀವವಿರೋಧಿ ಅಸಮಾನತೆಯನ್ನು ನಾಶಮಾಡಿ, ಜೀವಪರವಾದ ಸಮಾನತಾ ಆಶಯಗಳ ಮೂಲಕ ಪ್ರತಿಸಂಸ್ಕೃತಿಯ ನಿರ್ಮಾಣಕ್ಕೆ ಅಣಿಗೊಳ್ಳಬೇಕಾದ ಅನಿವಾರ್ಯತೆಯನ್ನು ತಮ್ಮ ಆಚರಣೆಗಳ ಮೂಲಕ ವ್ಯಕ್ತಪಡಿಸುವರು. ಆಸಾದಿಗಳು ಯಜಮಾನ ಸಂಸ್ಕೃತಿಯು ಹೇರಿರುವ ಸಾಮಾಜಿಕ ಅಸಮಾನತೆಗಳನ್ನು ಪ್ರಶ್ನಿಸುವ, ಪ್ರಭುತ್ವ ಸಂಸ್ಕೃತಿಯ ಪಾವಿತ್ರ್ಯವನ್ನು ನಾಶಮಾಡುವ ಹಾಗೂ ಪ್ರತಿಸಂಸ್ಕೃತಿ ನಿರ್ಮಾಣಕ್ಕೆ ಒತ್ತಾಯಿಸುವ ಬಗೆಯನ್ನು ರಹಮತ್ ತರೀಕೆರೆಯವರು ವಿಶ್ಲೇಷಿಸುವ ರೀತಿ ಹೀಗಿದೆ "ದುಡಿವ ವರ್ಗವು ತಮ್ಮನ್ನು ಕಂಡು ಅಪಹಾಸ್ಯ ಮಾಡಿ ನಗಲು, ಆ ಮೂಲಕ ಅದರಲ್ಲಿ ಸಂಗ್ರಹವಾಗಿರಬಹುದಾದ ಸಿಟ್ಟು ಹೊರಹೋಗಲು ಆಳುವ ವ್ಯವಸ್ಥೆಯೇ ಇಂಥ ಸ್ವಯಂ ತೇಜೋವಧೆಯ ಅವಕಾಶವನ್ನು ಕಲ್ಪಿಸಿಕೊಳ್ಳುತ್ತದೆ. ಜಾನಪದರಲ್ಲಿ ಇದಕ್ಕೆ ಕೆಲವು ನಿದರ್ಶನಗಳಿವೆ. ಗ್ರಾಮ ದೇವತೆಗಳ ಹಬ್ಬಗಳಲ್ಲಿ ಅಸ್ಪೃಶ್ಯರಾದ ಆಸಾದಿಗಳು ಸವರ್ಣೀಯ ದೇವರುಗಳಿಗೆ ಬಾಯಿಗೆ ಬಂದಂತೆ ಬಯ್ಯುವುದು, ಮುಖಕ್ಕೆ ಉಗಿಯುವುದು ಇದರಲ್ಲಿ ಒಂದಾಗಿದೆ. ಮಾರಿಹಬ್ಬದ ಈ ಮಿಥ್ ಕೆಳಜಾತಿಯೊಡನೆ ಕೊಡುಕೊಳೆ ನಡೆಯದಂತೆ, ಜಾತಿಸಂಕರವಾಗದಂತೆ, ಮೇಲ್ಜುದಿಯ ಜಾತಿಗಳು ಹೇರುವ ನಿಷೇಧದ ಸಂಕೇತವಾಗಿದೆ. ಚರಿತ್ರೆಯಲ್ಲಿ ಆಗಿರುವ ಈ ಅಪಮಾನವನ್ನು ಕೆಳಜಾತಿಗಳು ಬಯ್ಯುವ ಮತ್ತು ಉಗಿಯುವ ಪಾವಿತ್ರ್ಯನಾಶದಲ್ಲಿ ಸರಿದೂಗಿಸುತ್ತಿರುತ್ತವೆ" ಮೇಲ್ಜಾತಿ ದೇವರುಗಳನ್ನು ಬೈಯ್ಯುವ ಮತ್ತು ಅವರ ಸಂಸ್ಕೃತಿಯ

ಪಾವಿತ್ರ್ಯವನ್ನು ನಾಶಮಾಡುವ ತೀವ್ರ ಸ್ವರೂಪದ ಆಚರಣೆಯಾಗಿ ಕಂಡುಬರುವುದು. ಆದರೂ ಮೇಲ್ಜಾತಿ ಹುನ್ನಾರಗಳ ವಿರುದ್ಧ ಧಾರ್ಮಿಕ ಆಚರಣೆಗಳ ಸಂದರ್ಭದಲ್ಲಿ ಆಸಾದಿಗಳು ತಮ್ಮ ಪ್ರತಿಭಟನೆ ವ್ಯಕ್ತಪಡಿಸುವರು. ಉಳಿದಂತೆ ಮೇಲ್ಜಾತಿಗಳು ಹೇರಿರುವ ಸಾಂಪ್ರದಾಯಿಕ ಮೌಲ್ಯಗಳನ್ನು ಒಪ್ಪಿಕೊಂಡು ಮುನ್ನಡೆಯುವ ಸಾಮಾಜಿಕ ಬದುಕನ್ನು ಕಾಣುತ್ತೇವೆ.

ಎಂ. ಎಸ್. ಶೇಖರ್ ಅವರ ಈ ಖಂಡಕಾವ್ಯ ಸಮಕಾಲೀನ ವಸ್ತು ವಿಷಯವನ್ನು ವಿಶ್ಲೇಷಿಸುವುದು. ಅಜ್ಜನ ಕಾಲದಿಂದಲೂ ಹೊಟ್ಟೆಪಾಡಿಗೆ ಆಧಾರವಾಗಿದ್ದುದು ಗೌಡರ ಕೊಟ್ಟಿಗೆ. ಇದೇ ಕೊಟ್ಟಿಗೆಯಲ್ಲಿ ಶಾಲೆ ಆರಂಭವಾಯಿತು. ಹೊಲೆಯರನ್ನು ನಿರ್ದಾಕ್ಷಿಣ್ಯವಾಗಿ ಹೊರಗಟ್ಟಿದರು. ಕೊಟ್ಟಿಗೆಯಲ್ಲಿನ ಗುಂಡಿಗಳನ್ನು ಮುಚ್ಚಿ ಗೋಡೆಗಳಿಗೆ ಸುಣ್ಣ ಬಣ್ಣ ಕಾಣಿಸಿದ್ದು, ಹೊಲೆಮಾದಿಗರೂ ಅಕ್ಷರ ಕಲಿಯುವರೆಂಬ ಮಹದಾಸೆ ಹೊಂದಿದ್ದರು. ಆದರೆ ದಲಿತರು ಅಕ್ಷರ ಕಲಿಯುವುದನ್ನು ಮೇಲ್ಜಾತಿಯವರು ಸಹಿಸಲಿಲ್ಲ. ಅವರ ನಡವಳಿಕೆಯನ್ನು ವಿರೋಧಿಸಿದ ನಿರೂಪಕರ ತಂದೆ ಆರಾಣೆ ಜೀತ ಹಾಗೂ ಕರುಳಕುಡಿಯ ನೆನೆದು ಊರುಬಿಟ್ಟು ಹೋದನು.

***"ಕೊಟ್ಟಿಗೆ ಗುಂಡಿಗಳ ಸಂಭ್ರಮದಿಂದ ಮುಚ್ಚಿ***
***ಕೈಯ್ಯಾರ ಬೋರ್ಡು ತಗುಲಿಸಿದ್ದ ಅಪ್ಪ***
***ವರ್ಷಕ್ಕೆ ಆರಾಣೆ ಜೀತ ನೆನೆದು***
***ಕರುಳ ಕುಡಿಗಳ ಗತಿಗೆ ಬೆವೆತು***
***ಕಟ್ಟಿದರು ಪೇಟ ತಲೆಗೆ***
***ದಟ್ಟಿ ಪಂಚೆಯನುಟ್ಟು***
***ದುಪ್ಪಿಯ ಹೆಗಲಿಗೆ ಹಾಕಿದರು......***
***ನಂಟ ಕುಂಟಮೇಷ್ಟರನ್ನು***
***ಹೆಗಲ ಮೇಲೆ ಹೊತ್ತು***
***ಬಂತು ಅಪ್ಪನ ಸವಾರಿ ಊರಿಗೆ"***

ಹತ್ತು ಮೈಲಿ ದೂರದ ತನ್ನ ಬಂಧು ಕುಂಟು ಮೇಷ್ಟರನ್ನು ನಿರೂಪಕರ ತಂದೆ ಹೊತ್ತು ತಂದನು. ಶಾಲೆಗೆ ತಮ್ಮ ಮಕ್ಕಳನ್ನು ಸೇರಿಸಿಕೊಳ್ಳದ ಮೇಲ್ಜಾತಿಯವರಿಗೆ ಪ್ರತಿಭಟನಾತ್ಮಕವಾಗಿ ನಸುಕಿನಲ್ಲಿ ಹಾಡು, ವಾದ್ಯಗಳ ಸಂಭ್ರಮದೊಂದಿಗೆ ಕೆರೆಬೀರ ದೇವಸ್ಥಾನದಲ್ಲಿ ಕುಂಟು ಮೇಷ್ಟರ ಕೈಯಿಂದ ಶಾಲೆಯನ್ನು ಶುರುಮಾಡಿಸಿದರು. ದಲಿತ ಕೇರಿ ಸಂಭ್ರಮಿಸಿತು. ಕೂಲಿಮಠದ ಬೆಲ್ಲಿನ ಶಬ್ಧಕ್ಕೆ ಸರ್ಕಾರಿ ಶಾಲೆಯ ಶರಣಮೇಸ್ಟರು, ಪಟೇಲ, ಶಾನುಭೋಗರು ಹೆದರಿದರು. ತನ್ನ ಜವಾಬ್ದಾರಿಯನ್ನು ಮರೆತಿದ್ದ ಶರಣಮೇಷ್ಟರು ಹೊಲಗೇರಿಗೆ ತೆರಳಿ ಸೆನ್ಸಸ್ ಮಾಡಿ ಕೇರಿಯ ಮಕ್ಕಳಿಗೆ ಹಲವು ರೀತಿಯ ನಿರ್ಬಂಧವನ್ನು ವಿಧಿಸಿ ಶಾಲೆಗೆ ಸೇರಿಸಿಕೊಂಡರು. ಕೂಲಿಮಠದ ಕಡಕ್ ಕುಂಟು ಮೇಷ್ಟರು ಛಡಿಏಟು, ಹೊಡೆದು, ಒಳಸುಂಟಿಗಳನ್ನು ನೀಡಿ ಕೇರಿಯ ಮಕ್ಕಳನ್ನು ತಹಬಂದಿಗೆ ತಂದಿದ್ದರು.

ಚೀಮನಹಳ್ಳಿ ರಮೇಶ್‌ರವರ ಈ ನಾಗ್ದಾಳೆ ಮಹಳಾ ಸಂವೇದನೆಯಲ್ಲಿ ರಚನೆಗೊಂಡಿರುವ ಕಾವ್ಯ. ಕಲ್ಲವ್ವನಂತೆ ಕಲ್ಲಾಗದೆ ಸತ್ಯವನ್ನು ಹೊರಗೆಡವು ಹಸನಾದ ಬದುಕು ನಿನ್ನದಾಗುತ್ತದೆ. ಗಂಗವ್ವನಿಗೆ ನಾಗ್ದಾಳೆ ತಿಳಿಸುವಾಗ ಪುರುಷ ಕ್ರೌರ್ಯವನ್ನು ಹಿಮ್ಮೆಟ್ಟಲು ಸಲಹೆ ನೀಡುವಳು. ಸ್ತ್ರೀಕುಲವು ನೋವು

ಅವಮಾನ ಅನುಭವಿಸಿದವರಲ್ಲಿ ಸಮಾನರು. ಕಲ್ಲವ್ವ, ಮಲ್ಲವ್ವ, ಎಲ್ಲವ್ವ, ನಲ್ಲವ್ವ ಎಲ್ಲರೂ ಶೋಷಣೆಗೆ ಒಳಗಾದವರೆ. ಎಂದು ಹೇಳುತ್ತಾ ಪ್ರಕೃತಿಯ ಮೇಲೆ ನಡೆಯುತ್ತಿರುವ ಸಮಕಾಲೀನ ದಾಳಿಗಳನ್ನು ನಾಗ್ಗಾಳೆ ಪ್ರತಿರೋಧಿಸುವಂತೆ ಇಲ್ಲಿ ಕಂಡುಬರುತ್ತದೆ.

***"ಬ್ಯಾಡವ್ವ ಬ್ಯಾಡೇ ಏನಾತು ಹೇಳವ್ವ***
***ಕಲ್ಲವ್ವನಂಕೆ ನೀನಾಗೂದು ಬ್ಯಾಡವ್ವ***
***ದೇವಿತಪಟ್ಟ ಕಟಿಕ್ಯಂಡು ಮೂಗ್ಯಾಗಿ ಕೂರಾದು***
***ಕನ್ನ ಕೆರಲವ್ವ ತಾಯೆ ಕಿಚ್ಚರಿಯಾಗಿ***
***ಗರುಬಾದ ನಿಪ್ಪು ಸಿಡಿಮದ್ದು ಆಗ್ಲಿ***
***ಸೌಡೀಯು ಯದರ್ಕಂಡು ಸೆರಗನ್ನ ವದ್ಕಳ್ಳಿ"***

ವರ್ತಮಾನದ ಬದುಕು ಹಸನುಗೊಳ್ಳಬೇಕು, ನೈಜವಾಗಿರಬೇಕು. ಇಲ್ಲದಿದ್ದರೆ ಕೋಮಲೆ, ಸಹನಾಮಯಿ, ದೇವತೆ ಹೀಗೆ ಪಟ್ಟಕಟ್ಟಿ ಸತ್ಯ ಹೂತುಬಿಡುತ್ತಾರೆ. ಕಲ್ಲವ್ವನನ್ನು ಬಲಿ ತೆಗೆದುಕೊಂಡ ಹಾಗೆ ಗಂಗವ್ವನನ್ನು ಬಲಿಪಡೆಯುವುದರಿಂದ ಪಾರು ಮಾಡಲು ಹಾಗೂ ವ್ಯವಸ್ಥೆಯ ವಿರುದ್ಧ ತನ್ನ ಆಕ್ರೋಶವನ್ನು ನಾಗ್ಗಾಳೆ ಹೊರಹಾಕುತ್ತಾಳೆ. ಹೆಣ್ಣಿಗಾಗುವ ಶೋಷಣೆಯ ವಿರುದ್ಧ ದನಿಯೆತ್ತುವ ನಾಗ್ಗಾಳೆ ಗಂಗವ್ವನನ್ನು ಎಚ್ಚರಿಸುತ್ತಾಳೆ. ಇದು ನಾಗ್ಗಾಳೆಯ ಪ್ರತಿಭಟನೆ.

ಅವಳಿ ಹೆಣ್ಣು ಮಕ್ಕಳ ಕಾರಣಕ್ಕಾಗಿ ಗಂಗವ್ವನ ಬದುಕು ದುಸ್ಥಿತಿಗಿಳಿದಿದೆ. ಸಮಾಜದ ನೈತಿಕ ಜೀವನಮಟ್ಟವನ್ನು ಆಧುನಿಕ ಭ್ರಮೆಯ ಸೋಗಿನಲ್ಲಿ ಸ್ವೇಚ್ಛೆಯಾಗಿ ಆ ಹೆಣ್ಣು ಮಕ್ಕಳು ಜೀವಿಸುತ್ತಿದ್ದರು. ಸಂಪ್ರದಾಯ ಕಟ್ಟಳೆ ಇವುಗಳನ್ನು ದಿಕ್ಕರಿಸಿ ಬದುಕುವ ಅವರಿಗೆ ಊರಿನ ಜನ ನಗ್ನಗೊಳಿಸಿ ಶಿಕ್ಷೆ ನೀಡಿದರು. ಗಂಗವ್ವ ನಾಗ್ಗಾಳೆಗೆ ಹೇಳುತ್ತಾಳೆ

***"ನನ್ನೈಕ್ಳು ಸಿಡಿಯುತ್ತ ಕಣುಗಾಳಬಿಟ್ವು***
***ನರುಕಿದ್ರು ಗಾಳ್ಯಾಕ ಜೋಡ್ಯಾಗಿ ಬಾಳ್ತೀವಿ***
***ನನ್ಬಾಳು ನಮ್ವಾಡು ನಮ್ಮಕ್ಳು ಅಂದ್ವು***
***ಪೊಗರಂತು ಊರು ನಿಗುರ್ಕಂಡು ನಿಲ್ತು***
***ಬಾದ್ನಾಕೆ ಎದೆಯುಬ್ಬಿ ಯುದ್ದಕ್ಕೆ ನಿಂತ್ವು"***

ಈ ದೇಶದಲ್ಲಿ ವ್ಯಕ್ತಿ ಸ್ವಯಿಚ್ಛೆಯಿಂದ ಬದುಕಲು ಜೀವನ ನಡೆಸಲು ಅವಕಾಶವಿದೆ. ಜೈವಿಕವಾಗಿ ಒಂದೇ ರೀತಿಯಾಗಿದ್ದ ಹಾಗೂ ತ್ರಿಲಿಂಗಿಗಳಾದವರು ತಾವು ಬಯಸಿದಂತೆ ಬದುಕುವರು. ಸಮಾಜದ ನೈತಿಕ ಪ್ರಶ್ನೆ ಎದುರಾದಾಗ ಸಹಜವಾಗಿ ವಿರೋದಿಸುವುದು ಕಂಡುಬರುತ್ತದೆ. ಅವಳಿ ಹೆಣ್ಣು ಮಕ್ಕಳು ನಮ್ಮ ಬದುಕು ನಮ್ಮದಾಗಿದೆ. ಎಂದು ಸಮಾಜದ ಕಟ್ಟು ನಿಟ್ಟಿನ ಆಚರಣೆಯ ವಿರುದ್ಧ ತಿರುಗಿಬೀಳುತ್ತಾರೆ. ಕಡೆಗೂ ಮೂಕಸದೃಶಳಾದ ಗಂಗವ್ವನನ್ನು ನಾಗ್ಗಾಳೆ ಎಚ್ಚರಿಸುತ್ತಾಳೆ.

***"ತಲೆಯೆತ್ತಿ ನಿಲ್ಲವ್ವ ತಂಗ್ಯವ್ವ ಗಂಗವ್ವ***
***ಊರನ್ನು ಉರುಪೊಡೆದ ನಿಪ್ಪಂತ ನೀತಿಗೆ***
***ಬಲುಮನ್ನ ನೀಸ್ಕಂಡು ತಲಿಕೊಡಬ್ಯಾಡ"***

ಗಂಗೆಯು ಸಹಾ ಕಲ್ಲವ್ವನ ಹಾಗೆ ಊರಿನ ಕುತಂತ್ರಕ್ಕೆ ಬಲಿಯಾದರೆ ಮತ್ತೊಬ್ಬ ಕಲ್ಲವ್ವಳಾಗುವಳೇ ಹೊರತು ಬದುಕು ಹಸನಾಗದು. ಆದ್ದರಿಂದ ಊರಿನ ಬಲಿಹಾರದ ನೀತಿಯನ್ನು ಧಿಕ್ಕರಿಸು ಎನ್ನುತ್ತಾಳೆ ನಾಗ್ಡಾಳೆ. ಮುಂದುವರಿದು

***"ಅಮಾಸಿ ಊರಾಗ ಪಂಜಿಡಿದು ಏಳವ್ವ***
***ಕುದಿಕುದಿಯೊ ಸೀಮ್ಯಾಗ ಬೆಳ್ದಿಂಗ್ಳು ಆಗವ್ವ***
***ಚುಚ್ಚಾಡೊ ಊರಾಕ ಕೊಂಡಂತೆ ನಿಲ್ಲವ್ವ***
***ಸೀಮಿಗಳ ಸಾಲ್ನಂಗೆ ದಿಟ್ಟಾಗಿ ನಡಿಯವ್ವ***
***ಸೌಡೀಯೂ ಎದುರೊಂಗೆ ಬಲ್ಯಾರ ಅನ್ನವ್ವ***
***ಏಳೂರು ಕೇಳೊಂಗೆ ಬಲ್ಯಾರ ಅನ್ನವ್ವ***
***ಸೀಮೇನು ಬೆದುರೋಂಗೆ ಬಲ್ಯಾರ ಅನ್ನವ್ವ"***

ಗಂಗವ್ವನಲ್ಲಿರುವ ತಾಳ್ಮೆಯ ಗುಣವನ್ನ ಪರೀಕ್ಷೆಗೊಡ್ಡುವ ಹಾಗೆ ಪ್ರತಿರೋಧ ತೋರುವ ರೀತಿಯನ್ನು ನಾಗ್ಡಾಳೆಯಲ್ಲಿ ಗುರ್ತಿಸಬಹುದು. ಬಂಡಾಯ ಸಾಹಿತ್ಯದ ಮುಖ್ಯ ಆಶಯವೂ ಇದೇ ಆಗಿದೆ. ಗಂಗವ್ವ ತನ್ನ ಬದುಕು ಹಸನಾಗಲು ಊರಿನ ವ್ಯವಸ್ಥೆಯ ವಿರುದ್ಧ ಪ್ರತಿಭಟನೆ ಮಾಡಬೇಕಾಗಿದೆ.

**ಆಕರ ಗ್ರಂಥಗಳು**


- ಅರವಿಂದ ಮಾಲಗತ್ತಿ. (2003). *ಶ್ರೀ ಚಂಡಾಲ ಸ್ವರ್ಗಾರೋಹಣಂ.* ಅಭಿರುಚಿ ಪ್ರಕಾಶನ
- ಚೆನ್ನಣ್ಣ ವಾಲೀಕಾರ. (2010). *ಸಮಗ್ರ ಕಥನ ಕವನಗಳು.* ಕನ್ನಡ ಅಭಿವೃದ್ಧಿ ಪ್ರಾಧಿಕಾರ.
- ಚೀಮನಹಳ್ಳಿ ರಮೇಶ್‌ಬಾಬು. (2018). ನಾಗ್ಡಾಳೆ. ಅನಿಮ ಪ್ರಕಾಶನ.
- ವಡ್ಡಗೆರೆ ನಾಗರಾಜಯ್ಯ. (2000). *ಆಸಾದಿ.* ಪಂಚಮ ಪ್ರಕಾಶನ.
- ಶೇಖರ್ ಎಂ. ಎಸ್. (2010). *ಧೂರ್ತಳ್ಳಿಗೊಂದು ಕಿರಿಯ ಪ್ರಾಥಮಿಕವೂ–ಕೇರಿಗೊಂದು ಕೂಲಿಮಠವೂ.* ಪಲ್ಲವ ಪ್ರಕಾಶನ.
- ಸಿದ್ದಲಿಂಗಯ್ಯ. (1996). *ಅಲ್ಲೆ ಕುಂತವರೆ, ದಲಿತ ಕಾವ್ಯ.* ಸಾಹಿತ್ಯ ಅಕಾಡೆಮಿ.
- ಸಿದ್ದಯ್ಯ ಕೆ. ಬಿ. (2018). ಸಮಗ್ರ ಖಂಡಕಾವ್ಯಗಳು. ಕನ್ನಡ ಪುಸ್ತಕ ಪ್ರಾಧಿಕಾರ.


**ಪರಾಮರ್ಶನ ಗ್ರಂಥಗಳು**


- ಬಸವರಾಜ ಸಾದರ (ಸಂ.) (2019). *ಕನ್ನಡ ಸಾಹಿತ್ಯದ ಘಟ್ಟಗಳು.* ವಿದ್ಯಾವರ್ಧಕ ಸಂಘ.
- ದಂಡಪ್ಪ. ಹೆಚ್. (ಸಂ.) (2001). *ಬಡವರ ನಗುವಿನ ಶಕ್ತಿ.* ಅಂಕಿತ ಪ್ರಕಾಶನ.
- ಲಿಂಗಪ್ಪ ಹೆಚ್. (2017). *ಮಾತಂಗರ ಕಥನ–ಮುನ್ನುಡಿ.* ರಶ್ಮಿ ಪ್ರಕಾಶನ.
- ಮಂಜುಳ. ಬಿ. ಎಸ್. (2017). *ದಲಿತ ಬಂಡಾಯ ಕಾವ್ಯ : ಸಾಂಸ್ಕೃತಿಕ ಅಧ್ಯಯನ.* ರಾಜ್ ಪ್ರಕಾಶನ.
- ಮೊಗಳ್ಳಿ ಗಣೇಶ್. (2002). *ದಲಿತ ಚಿಂತನೆ.* ಪ್ರಸಾರಾಂಗ, ಹಂಪಿ ವಿಶ್ವವಿದ್ಯಾಲಯ.
- ರಹಮತ್ ತರೀಕೆರೆ. (1993). *ಪ್ರತಿಸಂಸ್ಕೃತಿ.* ಅಭಿನವ ಪ್ರಕಾಶನ.